**ಓ.ಎಸ್. 143/2020** **ಪಿ.ಡಬ್ಲೂಃ 3**

ಸಾಕ್ಷಿಯನ್ನು ದಿಃ 21.06.2022 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು.

**ಮಧ್ಯಕಾಲಿಕ ಅರ್ಜಿ ಸಂಖ್ಯೆ 9 ಮತ್ತು 10 ರ ಆದೇಶದ ಮೇರೆಗೆ ಸಾಕ್ಷಿಯನ್ನು ಹಿಂದಕ್ಕೆ ಕರೆಯಿಸಿ ಮುಂದುವರೆದ ಪಾಟೀಸವಾಲು ಪ್ರತಿವಾದಿಗಳ ಪರ ಶ್ರೀ ಬಿ.ಎಸ್. ವೈ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಚಾರಗಳನ್ನು ನಾನು ತಿಳಿದುಕೊಂಡೆ ಸಹಿ ಮಾಡಿರುತ್ತೇನೆ. ನನ್ನ ಮುಖ್ಯ ಪ್ರಮಾಣ ಪತ್ರದಲ್ಲಿ ಬರೆಸಿರುವ ಅಂಶಗಳ ಮಾಹಿತಿಯನ್ನು ವಕೀಲರಿಗೆ ನಾನೆ ಕೊಟ್ಟಿದ್ದೆ. ನಾನು ದೊಡ್ಡೇಗೌಡನ ಕೊಪ್ಪಲಿನ ವಾಸಕ್ಕೆ ಹೋಗುವ ಮೊದಲು ನಾನು ಮರದೂರು –ಹೊಸೂರಿನಲ್ಲಿ ವಾಸವಾಗಿದ್ದೆ ಎಂದರೆ ಸರಿ. ನನ್ನ ತಂದೆಯ ಹೆಸರು ತಮ್ಮೇಗೌಡ ಎಂದರೆ ಸರಿ. ನಾವು ವಾಸವಾಗಿದ್ದ ಮರದೂರು– ಹೊಸೂರಿನಲ್ಲಿ ನನ್ನ ತಂದೆ ತಮ್ಮೇಗೌಡ ಬಿಟ್ಟು ಬೇರೆ ಯಾರು ಆ ಹೆಸರಿನವರು ಇಲ್ಲ ಎಂದರೆ ಸರಿಯಲ್ಲ, ಬೇರೆಯವರು ಇದ್ದಾರೆ. ಸುಬ್ಬಮ್ಮನವರ ಗಂಡನ ಹೆಸರು ವಣಕೆರೆಗೌಡ ಆಗಿದ್ದು, ತಮ್ಮೇಗೌಡ ಅಲ್ಲ ಎಂದರೆ ಸರಿಯಲ್ಲ.

ನಾನು ಈ ದಾವಾದಲ್ಲಿ ವಾದಿಯರ ಪರವಾಗಿ ಸಾಕ್ಷಿ ನುಡಿಯಲು ಬಂದಿದ್ದೆನೆ ಎಂದರೆ ಸರಿ. ವಾದಿಯರಿಗೆ ಅನುಕೂಲ ಮಾಡಿ ಕೊಡುವ ಸಲುವಾಗಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯವರಿಗೆ ತೊಂದರೆ ಕೊಡುವ ಉದ್ದೇಶದಿಂದ ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.